# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ

## ಮಾದರಿ ಪ್ರಶ್ನೆಪತ್ರಿಕೆ : 2018–19

## ವಿಷಯ: ಸಮಾಜ ವಿಜ್ಞಾನ

**ಒಟ್ಟು ಪ್ರಶ್ನೆಗಳ ಸಂಖ್ಯೆ: 47** **ವಿಷಯ ಸಂಕೇತ: 85ಕೆ**

**ಸಮಯ: 3 ಗಂಟೆ** **ಗರಿಷ್ಠ ಅಂಕಗಳು: 80**

---

**ಅ. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ. ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.** **1*10=10**

1. ಎರಡನೇ ಭಾಜೀರಾಯನು ಸಹಾಯಕ ಸೈನ್ಯ ಪದ್ಧತಿಗೆ ಒಳಪಡಲು ಕಾರಣ

    ಎ) ಹೊಳ್ಕರನ ಸೈನ್ಯ ಎರಡನೇ ಬಾಜೀರಾಯನ ಸೈನ್ಯವನ್ನು ಸೋಲಿಸಿತು.

    ಬಿ) ಮರಾಠ ಮನೆತನಗಳ ನಾಯಕರಲ್ಲಿ ಸಂಘರ್ಷವಿತ್ತು.

    ಸಿ) ಪಶ್ಚಿಮ ಸೈನ್ಯವನ್ನು ಲಾರ್ಡ್‌ವೆಲ್ಲೆಸ್ಲಿ ಸೋಲಿಸಿದನು.

    ಡಿ) ಪೇಶ್ವೆ ಎರಡನೇ ಭಾಜೀರಾಯನು ಬ್ರಿಟೀಷರಿಂದ ಸೋಲನ್ನನುಭವಿಸಿದನು.

2. 1905 ರಲ್ಲಿ ಬಂಗಾಳವನ್ನು ವಿಭಜಿಸಲು ಕಾರಣ

    ಎ) ಹಿಂದೂ ಮುಸಲ್ಮಾನರನ್ನು ಬೇರ್ಪಡಿಸುವುದು.

    ಬಿ) ಬ್ರಿಟೀಷರ ವಿರುದ್ಧ ಹೋರಾಟಗಳನ್ನು ಧಮನಗೊಳಿಸುವುದು.

    ಸಿ) ಪಶ್ಚಿಮ ಬಂಗಾಳ ಭಾಗವನ್ನು ಅಭಿವೃದ್ಧಿಗೊಳಿಸುವುದು.

    ಡಿ) ಜನರಿಗೆ ಮೂಲ ಸೌಕರ್ಯಗಳನ್ನು ಒದಗಿಸುವುದು.

3. (ಯು.ಎಸ್.ಎಸ್.ಆರ್.) ಸೋವಿಯಟ್ ರಷ್ಯಾದಲ್ಲಿ ಸಮಾಜವಾದ ಕುಸಿಯಲು ಕಾರಣ

    ಎ) ಗೋರ್ಬೆಚೋಪನ ಸುಧಾರಣೆಗಳು

    ಬಿ) ಕಾರ್ಲ್ ಮಾರ್ಕ್ಸ್‌ನ ವೈಜ್ಞಾನಿಕ ಸಮಾಜವಾದ

    ಸಿ) ಅಕ್ಟೋಬರ್ ಕ್ರಾಂತಿ

    ಡಿ) ಸಮಾಜವಾದಿ ರಾಷ್ಟಗಳ ಬಣದ ನಾಯಕತ್ವ ಜೋಸೆಫ್ ಸ್ಟಾಲಿನ್ ವಹಿಸಿದ್ದು

4. ಭಾರತದ ವಿದೇಶಾಂಗ ನೀತಿ ವಸಾಹತುಶಾಹಿತ್ವವನ್ನು ವಿರೋಧಿಸುತ್ತದೆ. ಏಕೆಂದರೆ ಭಾರತ

ಎ) ಆಂಗ್ಲರ ಆಡಳಿತದಿಂದ ಅದನ್ನು ಅನುಭವಿಸಿತ್ತು.

ಬಿ) ಪಂಚಶೀಲ ತತ್ವಗಳಿಗೆ ಸಹಿ ಹಾಕಿತು.

ಸಿ) ತೃತೀಯ ಜಗತ್ತಿನ ನಾಯಕ

ಡಿ) ಯುರೋಪಿಯನ್ ರಾಷ್ಟ್ರಗಳೊಂದಿಗೆ ವ್ಯಾಪಾರ ಸಂಬಂಧ ಹೊಂದಿದೆ.

5. ಭದ್ರತಾ ಸಮಿತಿಯು ವಿಶ್ವ ಸಂಸ್ಥೆಯ ಕ್ಯಾಬಿನೆಟ್‌ನಂತೆ ಕಾರಣ

ಎ) ಐದು ಕಾಯಂ ಸದಸ್ಯರನ್ನು ಹೊಂದಿದೆ.

ಬಿ) ಹತ್ತು ಹಂಗಾಮಿ ಸದಸ್ಯರನ್ನು ಹೊಂದಿದೆ.

ಸಿ) ವಿಶೇಷ ಮತ ಚಲಾಯಿಸುವ ಅಧಿಕಾರ ಹೊಂದಿದೆ.

ಡಿ) ಜಾಗತಿಕ ಸಮಸ್ಯೆಗಳ ಪರಿಹಾರಕ್ಕಾಗಿ ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳುತ್ತದೆ.

6. ಇತ್ತೀಚಿನ ದಿನಗಳಲ್ಲಿ ಭಾರತದಿಂದ ಮೈಕಾ ರಫ್ತು ಪ್ರಯಾಣ ಕಡಿಮೆಯಾಗಿದೆ. ಕಾರಣ

ಎ) ಮೈಕಾದ ಉತ್ಕೃಷ್ಟತೆ ಕಡಿಮೆಯಾಗಿದೆ.

ಬಿ) ಕೃತಕ ಅಬ್ರಕದ ಉತ್ಪಾದನೆಯಿಂದ

ಸಿ) ಮೈಕಾ ನಿಕ್ಷೇಪಗಳು ಖಾಲಿಯಾಗಿವೆ.

ಡಿ) ಮೈಕಾದ ಬಳಕೆ ನಿಶೇಧಿಸಲ್ಪಟ್ಟಿದೆ.

7. ಶಿವರಾಂ ಕಾರಂತರ ನೇತೃತ್ವದಲ್ಲಿ ಕರ್ನಾಟಕ ಕರಾವಳಿ ಜನ ಹೋರಾಟ ನಡೆಸಿದರು. ಅವರಿಗೆ

ಎ) ಅಣುಸ್ಥಾವರ ದಟ್ಟ ಅರಣ್ಯವನ್ನು ನಾಶಪಡಿಸಬಹುದಾದ ಭೀತಿಯಿತ್ತು.

ಬಿ) ಕಲಸಿ ಅರಣ್ಯದಲ್ಲಿ ಸರ್ಕಾರ ಮರ ಕಡಿಯುವುದನ್ನು ನಿಲ್ಲಿಸಬೇಕಿತ್ತು.

ಸಿ) ಪರಿಸರ ಸಮತೋಲನ ಹಾಳಾಗುವ ಭಯವಿತ್ತು.

ಡಿ) ಪರಿಸರ ಮಾಲಿನ್ಯ ಹೆಚ್ಚಾಗುತ್ತೆ ಅನ್ನಿಸಿತ್ತು.

8. ಇವುಗಳಲ್ಲಿ ಕೇವಲ ವ್ಯವಸಾಯಾಧಾರಿತ ಕೈಗಾರಿಕೆಗಳ ಗುಂಪು.

ಎ) ಕಬ್ಬಿಣ, ಅಲ್ಯುಮಿನಿಯಂ, ತಾಮ್ರ ಕೈಗಾರಿಕೆಗಳು

ಬಿ) ಹತ್ತಿಬಟ್ಟೆ, ಸೆಣಬು, ಸಕ್ಕರೆ ಕೈಗಾರಿಕೆಗಳು

ಸಿ) ಜೈವಿಕ ತಂತ್ರಜ್ಞಾನ, ಮಾಹಿತಿ ತಂತ್ರಜ್ಞಾನ ಕೈಗಾರಿಕೆಗಳು

ಡಿ) ಚಿತ್ರೋದ್ಯಮ, ವಿದ್ಯುತ್ ಉಪಕರಣ, ಪ್ಲಾಸ್ಟಿಕ್ ಕೈಗಾರಿಕೆಗಳು.

9. ಭಾರತದ ಆಡಳಿತ ವ್ಯವಸ್ಥೆಯಲ್ಲಿ 73ನೇ ಸಂವಿಧಾನಾತ್ಮಕ ತಿದ್ದುಪಡಿ ಒಂದು ಪ್ರಮುಖ ಮೈಲುಗಲ್ಲಾಗಿದೆ. ಕಾರಣ

ಎ) (ಸಿವಿಲ್ ಸರ್ವಿಸ್) ನಾಗರೀಕ ಸೇವಾ ಪದ್ಧತಿ ಜಾರಿಗೆ ಬಂದಿತು.

ಬಿ) ಏಕರೂಪದ ಪಂಚಾಯತ್ ರಾಜ್ ಸಂಸ್ಥೆಗಳು ಅಸ್ತಿತ್ವಕ್ಕೆ ಬಂದಿತು.

ಸಿ) ಮೀಸಲಾತಿ ಪದ್ಧತಿ ಜಾರಿಗೆ ಬಂದಿತು.

ಡಿ) ಸಂಸತ್ತಿನ ವ್ಯವಸ್ಥೆಯಲ್ಲಿ ಸುಧಾರಣೆಗಳನ್ನು ತರಲಾಯಿತು.

10. ಜಾಗತೀಕರಣ ಮುಕ್ತ ವ್ಯಾಪಾರ ವಲಯ ಸೃಷ್ಟಿಸುವುದು.

ಎ) ಕಂಟೇನರ್ ಸೌಲಭ್ಯ ಒದಗಿಸುವುದರ ಮೂಲಕ

ಬಿ) ಸಹಾಯಧನ ಸೃಷ್ಟಿಸುವುದರ ಮೂಲಕ

ಸಿ) ಆಮದು ಮತ್ತು ರಫ್ತು ಸುಂಕಗಳನ್ನು ನಿರ್ಮೂಲನ ಮಾಡುವುದರ ಮೂಲಕ.

ಡಿ) ರಾಜಕೀಯ ಅಡಚಣೆಗಳನ್ನು ನಿವಾರಿಸುವುದರ ಮೂಲಕ.

**ಆ. ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದು ವಾಕ್ಯದಲ್ಲಿ ಉತ್ತರಿಸಿ : 1*14=14**

11. ಲಾರ್ಡ್ ವೆಲ್ಲೆಸ್ಲಿಯ ಕಾಲದಲ್ಲಿ ಬ್ರಿಟೀಷ್ ಆಡಳಿತದ ವಿಸ್ತರಣೆ ಸುಲಭವಾಯಿತು. ಏಕೆ ?

12. **'ಪಾಲಿಸಿ ಆಫ್ ಅಸರ್ಷನ್'** (Policy of Assertion) ಎಂದರೇನು ?

13. ಎರಡನೆ ಆಂಗ್ಲೋ ಮೈಸೂರು ಕದನವನ್ನು ಕೊನೆಗೊಳಿಸಲು ಕೈಗೊಂಡ ಒಪ್ಪಂದ ಯಾವುದು ?

14. ಶಾಸನ ರೂಪಿಸುವ ಪ್ರಕ್ರಿಯೆಯಲ್ಲಿ ಭಾರತೀಯರನ್ನು ಒಳಗೊಳ್ಳುವ ನೀತಿಯಿಂದ ಭಾರತೀಯರ ಮತ್ತು ಬ್ರಿಟೀಷರ ನಡುವಿನ ಅಂತರ ಕಡಿಮೆಯಾಯಿತು. ಹೇಗೆ ?

15. ಭಾರತೀಯ ವೃತ್ತ ಪತ್ರಿಕೆಗಳ ಅಭಿವೃದ್ಧಿಯಲ್ಲಿ ದೇಶೀಯ ಭಾಷಾ ಪತ್ರಿಕಾ ಕಾಯ್ದೆ (ವರ್ನಾಕ್ಯುಲರ್ ಪ್ರೆಸ್ ಆಕ್ಟ್) ಒಂದು ತೊಡಕಾಗಿತ್ತು. ಏಕೆ ?

16. ವರ್ಣಭೇದ ನೀತಿಯನ್ನು ಜಗತ್ತಿನಲ್ಲಿ ಎಲ್ಲಿಯೂ, ಯಾವ ರಾಷ್ಟ್ರವೂ ಅನುಸರಿಸಬಾರದು ಎಂಬ ವಿದೇಶಾಂಗ ನೀತಿಯನ್ನು ಭಾರತ ಹೇಳಿದೆ. ಏಕೆ ?

17. ಸಾಮಾಜಿಕ ಸ್ಥರ ವಿನ್ಯಾಸ ಎಂದರೇನು ?

18. ಮಹಿಳಾ ಚಳುವಳಿ ಎಂದರೇನು ?

19. ಸಾಂದ್ರ ಬೇಸಾಯವನ್ನು ವ್ಯಾಖ್ಯಾನಿಸಿ.

20. ಇಂದು ನಮ್ಮ ದೇಶದಲ್ಲಿ ಜ್ಞಾನಾಧಾರಿತ ಕೈಗಾರಿಕೆಗಳು ತೀವ್ರ ಗತಿಯಲ್ಲಿ ಅಭಿವೃದ್ಧಿಗೊಳ್ಳುತ್ತಿರುವ ಉದ್ಯಮವಾಗಿದೆ. ಏಕೆ ?

21. ವಿಶ್ವ ವ್ಯಾಪಾರ ಸಂಸ್ಥೆಯ ಕೇಂದ್ರ ಕಛೇರಿ ಎಲ್ಲಿದೆ ?

22. RBI ಸ್ಥಾಪನೆಗೊಂಡಿದ್ದು ಯಾವಾಗ ?

23. ಭೌಗೋಳಿಕ ಮೇಲ್ಮೈ ಲಕ್ಷಣಗಳು ಜನಸಂಖ್ಯಾ ಹಂಚಿಕೆಯ ಮೇಲೆ ಹೇಗೆ ಪ್ರಭಾವ ಬೀರುತ್ತದೆ ?

24. ಜನಸಾಂದ್ರತೆ ಮತ್ತು ಜನಸಂಖ್ಯೆಗಳಿಗಿರುವ ವ್ಯತ್ಯಾಸವೇನು ?

**ಇ. ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಎರಡರಿಂದ ಮೂರು ವಾಕ್ಯಗಳಲ್ಲಿ ಉತ್ತರಿಸಿ : 2*15=30**

25. ಮೂರನೆಯ ಕರ್ನಾಟಕ ಯುದ್ಧಕ್ಕೆ ಕಾರಣ ಮತ್ತು ಪರಿಣಾಮಗಳೇನು ?

26. ಭಾರತದ ಸಾಮಾಜಿಕ ಸುಧಾರಣಾ ಚಳುವಳಿಗೆ ಬ್ರಹ್ಮ ಸಮಾಜವು ಹೇಗೆ ಶ್ರಮಿಸಿತು. ಉತ್ತರಿಸಿ.

27. ರಾಜಕೀಯ ಅಂಶಗಳು ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಹೇಗೆ ದಾರಿಯಾಯಿತು ?

28. ಭಾರತವು ಸ್ವಾತಂತ್ರ್ಯ ಗಳಿಸಿದ ನಂತರ ಎದುರಿಸಿದ ಸಮಸ್ಯೆಗಳನ್ನು ಹೆಸರಿಸಿ.

ಅಥವಾ

ಭಾರತದ ಒಕ್ಕೂಟಕ್ಕೆ ಬಲವಂತವಾಗಿ ಸೇರಿಸಿಕೊಳ್ಳಲ್ಪಟ್ಟ ದೇಶೀಯ ಸಂಸ್ಥಾನಗಳನ್ನು ಹೆಸರಿಸಿ.

29. ಶಸ್ತ್ರಾಸ್ತ್ರ ಸಂಗ್ರಹ ಪೈಪೋಟಿಯಲ್ಲಿ ಅಮೇರಿಕವು ಹೇಗೆ ಮೇಲುಗೈ ಸಾಧಿಸಿತು ?

30. ಅನ್ಯ ರಾಷ್ಟ್ರಗಳೊಂದಿಗೆ ಭಾರತವು ಉತ್ತಮ ಬಾಂಧವ್ಯ ಹೊಂದುವುದು ಅನಿವಾರ್ಯವಾಗಿದೆ. ಏಕೆ ?

31. ತೃತೀಯ ಜಗತ್ತಿನ ರಾಷ್ಟ್ರಗಳು ಎದುರಿಸುತ್ತಿರುವ ಕುಂದು ಕೊರತೆಗಳೇನು ?

32. ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣಾ ಕಾಯಿದೆ 2012 ಜಾರಿಗೆ ತರಲು ಕಾರಣಗಳೇನು ?

33. ಉತ್ತರದ ಮೈದಾನಗಳ ಪ್ರಾಮುಖ್ಯತೆಯನ್ನು ವಿವರಿಸಿ.

34. ನೈರುತ್ಯ ಮಾನ್ಸೂನ್ ಮಾರುತಗಳ ಎರಡು ಶಾಖೆಗಳ ನಡುವಿನ ವ್ಯತ್ಯಾಸಗಳನ್ನು ತಿಳಿಸಿ.

35. ಅರಣ್ಯಗಳ ಪ್ರಾಮುಖ್ಯತೆಯಲ್ಲಿ ಯಾವುದಾದರೂ ನಾಲ್ಕನ್ನು ತಿಳಿಸಿ.

36. ಭಾರತಕ್ಕೆ ನೀರಾವರಿ ಸೌಲಭ್ಯ ಅತ್ಯಗತ್ಯ. ಏಕೆ ?

37. ಭಾರತದ ಸಾಗರ ಜಲಸಾರಿಗೆಗೆ ಪೂರಕವಾಗಿರುವ ಅಂಶಗಳಾವುವು ?

38. ಭಾರತದ ಸಂವಿಧಾನವು ಮಹಿಳೆಯರಿಗೆ ಪುರಷರಷ್ಟೆ ಸ್ವಾತಂತ್ರ್ಯ ಸಮಾನತೆ ನೀಡಿದ್ದರೂ ತಾರತಮ್ಯತೆ ಇನ್ನೂ ಕಡಿಮೆಯಾಗಿಲ್ಲ. ಏಕೆ ?

39. ಒಬ್ಬ ಗ್ರಾಹಕನು ತಾನು ಕೊಂಡ ವಸ್ತುವಿಗೆ ಗ್ಯಾರೆಂಟಿ ಇದ್ದಾಗ್ಯೂ ತಿರಸ್ಕರಿಸಲ್ಪಟ್ಟಾಗ ಆತನು ಏನು ಮಾಡಬಹುದು ?

**ಈ. ಈ ಪ್ರಶ್ನೆಗಳಿಗೆ ಆರರಿಂದ ಎಂಟು ವಾಕ್ಯಗಳಲ್ಲಿ ಉತ್ತರಿಸಿ.** **3*6=18**

40. ಭಾರತೀಯರ ಮೇಲೆ ಬ್ರಿಟೀಷ್ ಶಿಕ್ಷಣ ಪದ್ಧತಿಯು ಬೀರಿದ ಪರಿಣಾಮಗಳನ್ನು ವಿವರಿಸಿ.

ಅಥವಾ

ಕಿತ್ತೂರಿನ ಸ್ವಾತಂತ್ರ್ಯ ಹೋರಾಟದಲ್ಲಿ ಸಂಗೊಳ್ಳಿ ರಾಯಣ್ಣನ ಪಾತ್ರವನ್ನು ವಿವರಿಸಿ.

41. ಕೋಮುವಾದವನ್ನು ನಿಯಂತ್ರಿಸಲು ಕೈಗೊಳ್ಳಬಹುದಾದ ಮುನ್ನೆಚ್ಚರಿಕೆ ಕ್ರಮಗಳೇನು ?

ಅಥವಾ

ವಿಶ್ವಸಂಸ್ಥೆಯ ಗುರಿಗಳೇನು ?

42. ಶೈಕ್ಷಣಿಕ ಸಮಾನತೆಯನ್ನು ಸ್ಥಾಪಿಸಲು ನಮ್ಮ ಸರ್ಕಾರವು ಕೈಗೊಂಡಿರುವ ಕ್ರಮಗಳನ್ನು ವಿವರಿಸಿ.

ಅಥವಾ

ಭಾರತದ ದುಡಿಮೆಯೊಳಗಿರುವ ಅಸಮಾನತೆಗಳನ್ನು ವಿವರಿಸಿ.

43. ಮುಂಬಯಿ ನಗರವು ಇಂದಿಗೂ ಪ್ರಸಿದ್ಧ ಹತ್ತಿ ಜವಳಿ ಉತ್ಪಾದನಾ ಕೇಂದ್ರವಾಗಿದೆ. ಏಕೆ ?

ಅಥವಾ

ಪ್ರಪಂಚದಲ್ಲಿ ಇಂದು ಸಂಭವಿಸುವ ಭೂಕುಸಿತಗಳಿಗೆ ಮಾನವ ಕೃತ್ಯಗಳು ಕಾರಣವಾಗಿವೆ. ಹೇಗೆ ?

44. ಭಾರತೀಯ ರಿಸರ್ವ್ ಬ್ಯಾಂಕಿನ ಕಾರ್ಯಗಳೇನು ?

ಅಥವಾ

ಸಾರ್ವಜನಿಕ ವೆಚ್ಚದ ಉದ್ದೇಶಗಳೇನು ?

45. ಅಂಚೆ ಕಛೇರಿಗಳು ಒದಗಿಸುವ ಸೇವೆಗಳೇನು ?

ಅಥವಾ

ಉದ್ಯಮಿಯ ಕಾರ್ಯಗಳೇನು ?

**ಉ. ಈ ಪ್ರಶ್ನೆಗೆ ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿ.** **4*1=4**

46. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ರೈತರ ಪ್ರತಿಭಟನೆಗಳ ಪಾತ್ರವನ್ನು ವಿವರಿಸಿ.

47. ಭಾರತದ ನಕ್ಷೆ ಬರೆದು ಇವುಗಳನ್ನು ಗುರುತಿಸಿ. **1+3=4**

ಎ) 82 $^1/_2$ ಪೂರ್ವ ರೇಖಾಂಶ ಬಿ) ಎನ್ನೋರ್ ಸಿ) ನಹರ್ಕಾತಿಯ

***************